C.C. No.- 582/2017
CW-17/ PW-09

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಗಂಗಾವತಿ

ಸಾಕ್ಷಿಯನ್ನು ದಿನಾಂಕ- 14.10.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಈರಣ್ಣ |
| ತಂದೆ / ಗಂಡನ ಹೆಸರು- | ಭರ್ತಪ್ಪ ಹುಲಿಪ್ಯಾಟಿ |
| ವಯಸ್ಸು- | 39 ವರ್ಷಗಳು |
| ಉದ್ಯೋಗ- | ಕೂಲಿ ಕೆಲಸ |
| ವಾಸಸ್ಥಳ- | ಗಂಗಾವತಿ |

ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-

ನನಗೆ ಚಾಸಾ- 1 ರಿಂದ 16, 18 ರಿಂದ 22 ಗೊತ್ತಿಲ್ಲ. ಆರೋಪಿತನ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸ.ಸ.ಅ. ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲು- ಸ. ಸ. ಅ. ಅವರಿಂದ-

2. ನಾವು ನಮ್ಮ ಮನೆಯಲ್ಲಿ ಜಮಾ ಮಾಡಿಕೊಂಡಿದ್ದ ಸುಮಾರು 5-6 ತಿಂಗಳ ಅಕ್ಕಿ, ಗೋಧಿಯನ್ನು ಆರೋಪಿ ನಮ್ಮ ಮನೆಯ ಹತ್ತಿರ ಬಂದು ಜಾಸ್ತಿ ದುಡ್ಡು ಕೊಟ್ಟು ಖರೀದಿ ಮಾಡಿಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ. ನಮಗೆ ಗೊತ್ತಾಗದೇ ನಾವು ಪಡಿತರ ಅಕ್ಕಿ ಮತ್ತು ಗೋಧಿಯನ್ನು ಆರೋಪಿಗೆ ಕೊಟ್ಟಿದ್ದು ಅವನು ಅವುಗಳನ್ನು ಕಡಿಮೆ ಬೆಲೆ ಖರೀದಿಸಿ ನಂತರ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾನೆ ಅಂತಾ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತನು ಆ ರೀತಿ ಒಟ್ಟು

244 ಚೀಲಗಳಲ್ಲಿ ತಲಾ 50 ಕೆ.ಜಿಯಂತೆ ಅಕ್ಕಿ ಮತ್ತು 127 ಚೀಲಗಳಲ್ಲಿ ತಲಾ 50 ಕೆ.ಜಿಯಂತೆ ಗೋಧಿಯನ್ನು ತನ್ನ ಗೋಡೌನನಲ್ಲಿ ಸಂಗ್ರಹಿಸಿಟ್ಟಿದ್ದನು ಎಂದರೆ ಸರಿಯಲ್ಲ. ಅವುಗಳನ್ನು ಚಾಸಾ- 1 ರವರು ದಾಳಿ ಮಾಡಿ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ:19-09-2016 ರಂದು ಈಗ ಓದಿ ಹೇಳಿದಂತೆ ನಾನು ........ ಜಪ್ತಿ ಪಡಿಸಿಕೊಂಡಿರುವುದಾಗಿ ತಿಳಿದಿರುತ್ತದೆ ಅಂತಾ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ನನಗೆ ನಿಪಿ-7 ರಲ್ಲಿ ಬರೆದ ವಿಚಾರ ಗೊತ್ತಿದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀಸವಾಲು- ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದು ಪಾಟೀಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.
ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಗಂಗಾವತಿ